ಪಾರ್ಥೇನಿಯಂ ಕಳೆ

875 (2429) ಶ್ರೀ ಎನ್.ಹೆಚ್. ಗೌಡ (ಕಾಮಟಾ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪಾರ್ಥೇನಿಯಂ ಕಳೆಯಿಂದ ಸಸ್ಯ ಸಂಪತ್ತಿಗಾಗುವ ನಷ್ಟದ ಅರಿವು ಸರ್ಕಾರದಪರಿಗಿದೆಯೆ?

ಆ) ಹಾಗಿದ್ದಲ್ಲಿ ಆ ಕಳೆಯ ನಾಶಕ್ಕಾಗಿ ಸರ್ಕಾರವು ಕೈಗೊಂಡ ಕ್ರಮವೇನು?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಮುಂದೆ ಸರ್ಕಾರದವರು ಕೈಗೊಳ್ಳಬಹುದಾದ ಕ್ರಮಗಳೇನು?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಪ್ರದೇಶಗಳಲ್ಲಿ ಈ ಕಳೆಯು ಸಸ್ಯ ಸಂಪತ್ತಿಗೆ ನಷ್ಟವಾಗುವಷ್ಟು ಕಂಡು ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್ ಹೆಚ್. ಗೌಡ.—ಅಧ್ಯಕ್ಷರೇ, ಈ ಪಾರ್ಥೇನಿಯಂ ಕಳೆಯು ಪ್ರಭಾವ ಏನು ಎಂಬುದು ಸಾಮಾನ್ಯವಾಗಿ ಯಾರಿಗೂ ಗೊತ್ತಾದಂತೆ ಇಲ್ಲ. ಮಾನ್ಯ ಮಂತ್ರಿಗಳಾಗಲೀ, ಸರ್ಕಾರದ ಗಮನ ಕ್ಕಾಗಲೀ ಇದರಿಂದಾಗುವ ಆಪಾಯ ಬಂದಿರಲಿಕ್ಕಿಲ್ಲವೆಂದು ನನಗನಿಸುತ್ತದೆ. ಅರಣ್ಯ ಉಳಿಸುವುದಕ್ಕೆ ಅಷ್ಟಿಕೋ ಚಳುವಳಿಯನ್ನು ಪ್ರಾರಂಭ ಮಾಡುತ್ತಾರೆ, ಆದೇರೀತಿ ಪಾರ್ಥೇನಿಯಂ ನಿರ್ಮೂಲನೆಗೂ ಚಳುವಳಿಯು ಪ್ರಾರಂಭ ಆಗಬೇಕಾಗಿದೆ. ಈ ಪಾರ್ಥೇನಿಯಂ ಕಳೆ ಸಾಮಾನ್ಯವಾದ ಕಳೆಯಲ್ಲ. ಇದು ರಕ್ತ ಬೀಜಾಸುರನ ರಕ್ತ ಇದ್ದಂತೆ. ಎಲ್ಲೆಲ್ಲಿ ಒಂದು ಹನಿ ರಕ್ತ ಬೀಳುತ್ತೋ ಅಲ್ಲೆಲ್ಲಾ ಅಸುರರು ಹುಟ್ಟಿಕೊಂಡಾಗ ಇವರನ್ನು ಕಾಳಿಮಾತೆ ಸಾಲಿಗೆ ಚಾಚಿ ನಿರ್ಮೂಲನ ಮಾಡುವಂಥ ಪ್ರಸಂಗ ಬಂತು. ಆದೇರೀತಿಯಾಗಿ ಪಾರ್ಥೇನಿಯಂ ಕಳೆ ಬೆಳೆದುಕೊಂಡು ಬರುತ್ತಿದೆ. ಗಾಳಿಯಲ್ಲಿ ಪ್ರಸಾರವಾಗಿ ಎಲ್ಲಾ ಕಡೆಗೂ ಹಬ್ಬುತ್ತಿದೆ. ಬೆಂಗಳೂರು ಒಳ ವಲಯದಲ್ಲಿ ಇದು ಕಾಣುವುದಿಲ್ಲ. ಹೊರ ವಲಯದಲ್ಲಿ ನೋಡಿದರೆ ಗೊತ್ತಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಇದು ಬೆಳೆದುಕೊಂಡು ಬರುತ್ತಿದೆ. ಎಲ್ಲಿ ಪಾರ್ಥೇನಿಯಂ ಕಳೆ ಹುಟ್ಟುತ್ತದೋ ಅಲ್ಲಿ ಬೇರೆ ಯಾವ ಗಿಡಗಳೂ ಹುಟ್ಟುತ್ತಾ ಇಲ್ಲ. ಇದನ್ನು ಯಾವುದಾದರೂ ಹುಡುಗರು ಮೂಸಿ ನೋಡಿದರೆ ಮೂಗಿನಿಂದ ರಕ್ತ ಬರತ್ತದೆ. ನಮಗೆ ಆತಂಕ ಏನೆಂದರೆ, ಅರಣ್ಯ ಇಲಾಖೆಯವರು ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಧಾರವಾಡ ವೃತ್ತದ ಅರಣ್ಯ ಸಂರಕ್ಷಕರು ಹೆಚ್ಚು ಮುತುವರ್ಜಿ ವಹಿಸ ಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ನನ್ನ ಕ್ಷೇತ್ರವಾದ ಕಾಮಟಾ ಸುತ್ತಮುತ್ತಲೂ ಪ್ಲಾಂಟೇಷನ್ ತಯಾರಾಗಿದೆ ಎಂದು ಕಾಣುತ್ತದೆ. ಮಾನ್ಯ ಮಂತ್ರಿಗಳು, ಇದನ್ನು ಪರೀಕ್ಷಿಸಿ, ಇದರಲ್ಲಿ ಬಂದು ಭಾಗಕ್ಕೆ ''ಬ್ಯಾಂದಾವನ'' ಎಂದು ಹೆಸರು ಕೊಟ್ಟಿದ್ದಾರೆ. ಈ ಪಾರ್ಥೇನಿಯಂ ಕಳೆ, ಎಲ್ಲಿ ಬೆಳೆಯುತ್ತದೆ, ಅಲ್ಲಿ ಅಪಾಯಕಾರಿ. ಆದ್ದರಿಂದ, ಇದನ್ನು ನಾಶ ಮಾಡುವುದಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಜಿ. ಎಸ್. ಬಾಗಲಕೋಟ್.—ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಈ ಪಾರ್ಥೇನಿಯಂ ಕಳೆ ಬಗ್ಗೆ ಏನು ಆತಂಕ ವ್ಯಕ್ತಪಡಿಸಿದ್ದಾರೆ, ಅದು ಸತ್ಯ. ಒಂದು ಸಸಿಗೆ 8 ಸಾವಿರ ದಿಂದ 15 ಸಾವಿರದವರೆಗೆ ಮರು ಸಸಿಗಳನ್ನು ಬೆಳೆಸುವ ಶಕ್ತಿ ಇದೆ. ಈ ಪಾರ್ಥೇನಿಯಂ ಕಳೆಯಿಂದ ಅರಣ್ಯ ಇಲಾಖೆಗೆ ಯಾವ ತೊಂದರೆಯೂ ಇಲ್ಲ, ಆದರೆ ಇನ್ನೊಂದು ಜಾತಿಯ ಇಪಟೋರಿಯಂ ಕಳೆ ಬೆಳೆಯುತ್ತಿದೆ. ಈ ಕಳೆಯನ್ನು ಸಾಮಾನ್ಯವಾಗಿ ಇದು ಹೂವು ಬಿಡುವುದಕ್ಕೆ ಮುಂಚೆಯೇ ತೆಗೆದು ಮರುಕಳಿಸದಂತೆ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಒಟ್ಟಾರೆ, ಈ ಬಗ್ಗೆ ಸದಸ್ಯರ ಕಳಕಳಿ ನಿಜವಾಗಿಯೂ ಕೂಡ ಒಳ್ಳೆಯ ಕಳಕಳಿ.

ಶ್ರೀ ಬಿ.ಡಿ. ಬಸವರಾಜ್.—ಕಾಂಗ್ರೆಸ್ ಪಾರ್ಥೇನಿಯಂ ಕಳೆ ಜಾಸ್ತಿಯಾಗಿದೆ, ಇದಕ್ಕೆ ಏನು ಮಾಡುತ್ತೀರಿ?

ಶ್ರೀ ಜಿ.ಎಸ್. ಬಾಗಲಕೋಟಿ.—ಈ ಕಾಂಗ್ರೆಸ್ ಕಳೆಯನ್ನು ಕಳೆಯುವುದಕ್ಕೆ ಬೆಂಗಳೂರು ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಬೇರೆ ಕಳೆಯನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಈ ಕಾಂಗ್ರೆಸ್ ಕಳೆಯನ್ನು ನಾಶಮಾಡುವುದಕ್ಕೆ ಸಾಧ್ಯವಿದೆ. ಈ ಕಳೆಗೆ ಬೇರೆ ಹೆಸರು ಕೂಡ ಇಡಬಹುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪಾರ್ಥೇನಿಯಂ ಕಳೆಗೆ ಕಾಂಗ್ರೆಸ್ ಕಳೆ ಎಂದು ಹೇಳುತ್ತಾರೆ. ಇದಕ್ಕೆ ಗುಂಡೂರಾಯರ ಸರ್ಕಾರದಲ್ಲಿ ಒಂದು ಕ್ರಮ ತೆಗೆದುಕೊಂಡಿದ್ದರು. ಇದು ಬಹಳ ವೈಲ್ಡ್ ಆಗಿ ಬೆಳೆಯುತ್ತಿರುವುದರಿಂದ ಇದರ ನಿರ್ಮೂಲನ ಮಾಡಬೇಕೆಂದು ಅವರು ಕ್ರಮ ಕೈಗೊಂಡಿದ್ದರು.

ಶ್ರೀ ಜೆ.ಹೆಚ್. ಪಟೇಲ್.—ಕಾಂಗ್ರೆಸ್ ಕಳೆ ಬಹಳ ವೈಲ್ಡ್ ಆಗಿ ಬೆಳೆಯುತ್ತಾ ಬಂತು. ಇದು ಹಾನಿಕರ ಎಂದು ಈಗ ಒಂದು ಜನತಾ ಕಳೆ ಎಂದು ಮಾಡಿದ್ದೇವೆ. ಇದು ಬೇರೆ ಸಸಿಗಳಿಗೆ ಹಾನಿ ಮಾಡುವುದಿಲ್ಲ, ಬರೀ ಕಾಂಗ್ರೆಸ್ ಕಳೆಗೆ ಮಾತ್ರ ಹಾನಿ ಮಾಡುತ್ತದೆ.

ಗೋಕಾಕ್ ಪಟ್ಟಣದಲ್ಲಿ ನೂಲಿನ ಅಭಾವ ಮತ್ತು ನೂಲು ಮಾರಾಟ ಮಳಿಗೆ ಸ್ಥಾಪಿಸುವುದರ ಬಗ್ಗೆ

876 (2635) ಶ್ರೀ ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗೋಕಾಕ್ ಪಟ್ಟಣದಲ್ಲಿ ನೇಕಾರರಿಗೆ ನೂಲು ಸಿಗದೆ ಬೇರೆ ಸ್ಥಳಗಳಿಂದ ನೂಲು ತಂದು ನೇಯುತ್ತಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಗೋಕಾಕ್ ಪಟ್ಟಣದಲ್ಲಿ ನೂಲು ಮಾರಾಟ ಮಳಿಗೆ ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಹಾಗಿಲ್ಲದಿದ್ದಲ್ಲಿ ಈ ಮಾರಾಟ ಮಳಿಗೆ ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಎಂ. ರಘುಪತಿ (ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ಗೋಕಾಕ್‌ದಲ್ಲಿ ನೂಲು ಮಳಿಗೆ ಸ್ಥಾಪಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿಗಮಕ್ಕೆ ತಿಳಿಸಲಾಗಿದೆ.

ಇ) ಸೂಕ್ತ ಕಟ್ಟಡ ದೊರಕಿದೊಡನೆ ಪ್ರಾರಂಭಿಸಲಾಗುವುದು.

ಶ್ರೀ ಎಂ.ಎಲ್. ಮುತ್ತಣ್ಣವರ್.—ಅಧ್ಯಕ್ಷರೇ, ನೂಲು ಮಳಿಗೆಗೆ ಕಟ್ಟಡದ ವ್ಯವಸ್ಥೆ ಕೂಡಾ ಮಾಡಿಕೊಟ್ಟಿದ್ದೇವೆ. ಆದ್ದರಿಂದ ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಆಯಿತು, ಕಟ್ಟಡ ಸಿಕ್ಕಿದೆ, ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಿದ್ದೇನೆ.

ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಾಸದಿಂದ ಉಂಟಾಗಿರುವ ನಷ್ಟ

877 (2437) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವಿದ್ಯುತ್ ಪೂರೈಕೆಯಲ್ಲಿ ವೋಲ್ಟೇಜುಗಳಲ್ಲಿ ವ್ಯತ್ಯಾಸವಾಗುವುದರಿಂದ ಉದ್ದಿಮೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು ?